# ಒಬ್ಬ ಆಚಾರ್ಯನು ದೈವವೇ ಇಲ್ಲವೆಂಬ

**(ಶ್ರೀ ಮಧ್ವಾಚಾರ್ಯ ಸುಳಾದಿ)**

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru.
2. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru.
3. **Note:** The wordings in both the above books match fully.
4. **Note:** For pravachanas: Here only the I volume is uploaded. Other two volumes can be obtained in these links:
   a) https://www.youtube.com/watch?v=7eQpPlocdDM
   b) https://www.youtube.com/watch?v=mVjm9fQXwYo

**ರಾಗ ಕಲ್ಯಾಣಿ**

**ಧ್ರುವ ತಾಳ**

ಒಬ್ಬ ಆಚಾರ್ಯನು ದೈವವೇ ಇಲ್ಲವೆಂಬ
ಒಬ್ಬ ಆಚಾರ್ಯನು ದೈವಕೆ ಎಂಟು ಗುಣವೆಂಬ
ಒಬ್ಬ ಆಚಾರ್ಯನು ನಿರ್ಗುಣ ನಿರಾಕಾರ ನಿರೂಹನೆಂದು-
ತಾನೆ ದೈವವೆಂಬ
ಇವರೊಬ್ಬರೂ ವೇದಾರ್ಥವರಿತೂ ಅರಿಯರು
ಇವರೊಬ್ಬರೂ ಶಾಸ್ತ್ರಾರ್ಥವರಿತೂ ಅರಿಯರು
ಒಬ್ಬ ಮಧ್ವಾಚಾರ್ಯರೆ ಪುರಂದರ ವಿಠಲನೊಬ್ಬನೆ
ಎಂದು ತೋರಿ ಕೊಟ್ಟವರಾಗಿ || 1 ||

**ಮಟ್ಟ ತಾಳ**

ಹರಿ ಪರ ದೇವತೆ ಎಂಬ ಜ್ಞಾನವೇ ಜ್ಞಾನ
ಹರಿಯಡಿಗಳನೈದುವ ಮುಕುತಿಯೇ ಮುಕುತಿ
ಹರಿ ವಿರಹಿತ ಜ್ಞಾನ ಮಿಥ್ಯಾ ಜ್ಞಾನ
ಹರಿ ವಿರಹಿತ ಮುಕುತಿ ಮಾತಿನ ಮುಕುತಿ

ಹರಿ ಪರ ಸಿರಿ ಮಧ್ವಾಚಾರ್ಯರೇ ಗುರುಗಳು
ತ್ರೈಲೋಕ್ಯಕೆ ಪುರಂದರ ವಿಠಲನೇ ದೈವವು || 2 ||

**ರೂಪಕ ತಾಳ**

ಸುರತರುವಿರುತಿರೆ ಎಲವದ ಫಲ ಗಿಳಿ ಬಯಸಿಪ್ಪಂತೆ
ಹಿರಯರಾದರು ನೋಡ ಹರಿ ಪರ ದೈವೆಂದರಿಯದೆ
ಗುರುಗಳಾದರು ನೋಡ ಹರಿ ಪರ ದೈವೆಂದರಿಯದೆ
ಸಿರಿವಿರಿಂಚಿ ಭವಾದಿಗಳೆಲ್ಲ ಹರಿಯ ಡಿಂಗರಿಗರೆಂದರಿಯದೆ
ಹಿರಿಯರಾದರು ನೋಡು ಗುರುಗಳಾದರು ನೋಡ
ಸಿರಿ ಪುರಂದರ ವಿಠಲನ ತೋರಿದ
ಸಿರಿ ಮಧ್ವಾಚಾರ್ಯರಿರುತಿರೆ
ಗುರುಗಳಾದರು ನೋಡ || 3 ||

**ತ್ರಿವುಡೆ ತಾಳ**

ಸೋಹಂ ಎಂದು ಲೋಕವ ಮೋಹಿಸುವರ
ನಿರಾಕರಿಸಿ ದಾಸೋಹಂ ರಹಸ್ಯವನರುಹಿದ
ಸೋಹಂ ಎಂಬ ಸಿರಿ ಪುರಂದರ ವಿಠಲ ನಾಳು
ಮಧ್ವ ಮುನಿ ದಾಸೋಹಂ ಎಂಬ || 4 ||

**ಆದಿ ತಾಳ**

ವೈದಿಕ ಮತದಲಿ ನಡೆದೆವೆಂದು ತಾವು
ವೈಷ್ಣವವಂಬಿಟ್ಟು ಕೊಟ್ಟರು ಕೆಲವರು
ವೈಷ್ಣವ ಮತದಲ್ಲಿ ನಡದೆವೆಂದು
ವೈದಿಕವಂ ಬಿಟ್ಟುಕೊಟ್ಟರು ಕೆಲವರು
ವೈದಿಕ ವೈಷ್ಣವ ಒಂದೇ ಎಂದು ಮಧ್ವಮತ ಮುನಿ
ಪ್ರತಿಪಾದಿಸಿದ ಪುರಂದರ ವಿಠಲ ಮೆಚ್ಚೆ || 5 ||

**ಝಂಪೆ ತಾಳ**

ಏಕ ವಿಂಶತಿ ಕುಭಾಷ್ಯ ದೂಷಕನೆಂಬ
ಬಿರುದು ನಮ್ಮಯ ಗುರುರಾಯಗಲ್ಲದುಂಟೆ
ಪುರಂದರ ವಿಠಲ ಸರ್ವೋತ್ತಮನೆಂಬ
ಸಿದ್ಧಾಂತವು ನಮ್ಮ ಗುರು ರಾಯರಗಲ್ಲದುಂಟೆ || 6 ||

**ಅಟ್ಟ ತಾಳ**

ಹರಿಯೆ ಪರಮ ಗುರು ಪರಮೇಷ್ಠಿ ಗುರು ಸುರ
ಗುರು ಮಧ್ವಾಚಾರ್ಯ ಚಕ್ರವರ್ತಿ ಎಂ-
ದರಿತಿರೆ ಭಕುತಿ ಮುಕುತಿಯುಂಟು
ಪುರಂದರ ವಿಠಲನೆ ದೈವಾಧಿ ದೈವ
ಸುರ ಗುರು ಮಧ್ವಾಚಾರ್ಯರೆ ಚಕ್ರವರ್ತಿ || 7 ||

**ಜತೆ**

ಶರಣು ಸಿರಿ ಮಧ್ವಾಚಾರ್ಯರಿಗೆ ಪುರಂದರ ವಿಠಲಗೆ
ಶರಣು ಶರಣೆಂಬೆ ನಾನನವರತ || 8 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಸುಳಾದಿಯಲ್ಲಿ ದಾಸರು ತಮ್ಮಲ್ಲಿ ನಿಷ್ಠೆಯನ್ನು ಹುಟ್ಟಿಸಿದ ಶ್ರೀ ಮನ್ಮಧ್ವಚಾರ್ಯರ ತತ್ವಜ್ಞಾನ ಮಹತ್ವವನ್ನು ವಿವರವಾಗಿ ಹೇಳಿದ್ದಾರೆ.

**ಒಬ್ಬ ...... ವೆಂಬ** = ನಾಸ್ತಿಕ, ಮತಸ್ಥಾಪಕರು

**ಒಬ್ಬ ...... ವೆಂಬ** = ಅದ್ವೈತ ಮತ ವಾದಿಗಳು

**ಪರದೈವತ** = ಸರ್ವೋತ್ತಮ

**ಅರಿತೂ ಅರಿಯರು** = ನಿಜವಾದ ಜ್ಞಾನವಾಗಿಲ್ಲ

**ಎಲವ** = ಬೂರಲ ಮರ

**ಸೋಽಹಂ** = ಅಹಂ ಬ್ರಹ್ಮ

**ದಾಸೋಽಹಂ** = ಶ್ರೀಹರಿಯ ದಾಸ

**ವೈಷ್ಣವ** = ವಿಷ್ಣು ಭಕ್ತಿ

**ವೈಷ್ಣವ ಕೆಲವರು** = ಶುದ್ಧ ಭಾಗವತರು

**ಏಕ ವಿಂಶತಿ ಕುಭಾಷ್ಯ** = ೨೧ ಭಾಷ್ಯಗಳು : - ೧) ಭಾರತೀ ವಿಜಯ, ೨) ಸಚ್ಚಿದಾನಂದ ಭಟ್ಟ, ೩) ಬ್ರಹ್ಮ ಘೋಷ, ೪) ಶತಾನಂದ, ೫) ಉದ್ವತ, ೬) ವಿಜಯ, ೭) ರುದ್ರಭಟ್ಟ, ೮) ವಾಮನ, ೯) ಯಾದವ ಪ್ರಕಾಶ, ೧೦) ರಾಮಾನುಜ, ೧೧) ಭರ್ತೃ ಪ್ರಪಂಚ, ೧೨) ದ್ರುಮಿಡಾ, ೧೩) ಬ್ರಹ್ಮದತ್ತ, ೧೪) ಭಾಸ್ಕರ, ೧೫) ವಿಶಾರದ, ೧೬) ವೃತ್ತಿಕಾರಕ, ೧೭) ಜಯಭಟ್ಟ, ೧೮) ವಿಷ್ಣುಕ್ರಾಂತ, ೧೯) ವಾದೀಂದ್ರ, ೨೦) ಮಾಧವ ಭಟ್ಟ ಮತ್ತು ೨೧) ಶಂಕರ. (ಹರಿಕಥಾಮೃತಸಾರ ಭಾ.೧ ಪದ್ಯ ೮)

**Classification:** Suladi
**Name of Suladi:** srI madhwAcharya suLAdi
**Ankita:** purandara vittala
**Location:** NA
**Category:** Madhwacharya Stuti
**Sub-Category:** daiva, guna, veda, shastra, madhva, madhwacharya, Krishna, devi, mukti, jnana, gili, loka, priti, muni, sharana,
**Pravachana:** Parimala Raghavendran
**Explanation:** NA